ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ **02.07.2024**

ಪಾಟೀ ಸವಾಲುಃ ಶ್ರೀ ಡಿ ಡಿ ಸಿ ವಕೀಲರಿಂದ

ಫ್ರಾಸಾ 1 ರವರನ್ನು 8 ವರುಷಗಳಿಂದ ನೋಡಿದ್ದು ನನಗೆ ಅಷ್ಟಾಗಿ ಪರಿಚಯ ಇಲ್ಲ. ನಾನು ಫ್ರಾಸಾ 1 ರವರ ಬಳಿ ಕೂಲಿ ಕೆಲಸಕ್ಕೆ ಹೋಗುತ್ತಿರಲಿಲ್ಲ. ಸಾಮಾನ್ಯವಾಗಿ ಕೂಲಿ ಕೆಲಸಕ್ಕೆ ಬೆಳಗ್ಗೆ 9 ಗಂಟೆಗೆ ಹೋಗಿ ಸಂಜೆ 5 ಗಂಟೆಗೆ ವಾಪಾಸ್ಸು ಬರುತ್ತೇನೆ . ನನ್ನ ಮನೆ ಹೆಬ್ಬಾಲೆ ಪಟ್ಟಣದಿಂದ ಅರ್ಧ ಕಿ ಮೀ ದೂರದಲ್ಲಿರುತ್ತದೆ . ದಿ 24-02-2020 ರಂದು ನಾನು ಕೂಲಿ ಕೆಲಸಕ್ಕೆ ಹೋಗಿರಲಿಲ್ಲ. ಆ ದಿನ ನಾನು ಮನೆಯಲ್ಲಿದ್ದು 11-30 ರ ಸಮಯಕ್ಕೆ ಸಾಮಾನು ತೆಗೆದುಕೊಂಡು ಹೋಗಲು ಅಂಗಡಿಗೆ ನಡೆದುಕೊಂಡು ಬಂದಿರುತ್ತೇನೆ. ಅಂಗಡಿಗೆ ಬರುವಾಗ ನನ್ನೊಂದಿಗೆ ಯಾರು ಬರಲಿಲ್ಲ. 11-30 ಗಂಟೆಗೆ ನಾನು ಚಾಸಾ 6 ರವರ ಅಂಗಡಿಯ ಬಳಿ ಸಾಮಾನು ತೆಗೆದುಕೊಳ್ಳಲು ಬಂದಿದ್ದು ಅವರು ಅಂಗಡಿಯಲ್ಲಿ ಇಲ್ಲದ ಕಾರಣ ಅವರಿಗಾಗಿ ಕಾಯುತ್ತಿದ್ದೆ . ನಂತರ ಚಾಸಾ 6 ರವರು ಅಂಗಡಿಗೆ ಯಾವ ಸಮಯಕ್ಕೆ ಬಂದರು ಎಂದು ನನಗೆ ಗೊತ್ತಿಲ್ಲ. ಆ ಸಮಯಕ್ಕೆ ಗಲಾಟೆ ಪ್ರಾರಂಭವಾಗಿರುತ್ತದೆ . ಚಾಸಾ 6 ರವರ ಅಂಗಡಿಯಲ್ಲಿ ಸಿ ಸಿ ಕ್ಯಾಮರ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಾನು ಚಾಸಾ 6 ರವರ ಅಂಗಡಿಯ ಬಳಿ ಹೋಗಿ ಕಾಯುತ್ತಿರುವಾಗ ಪಕ್ಕದಲ್ಲಿ ಆರೋಪಿ ಇದ್ದುದ್ದನ್ನು ನಾನು ನೋಡಿರುತ್ತೇನೆ. ಆರೋಪಿ ಚಾಸಾ 6 ರವರ ಅಂಗಡಿಯಿಂದ 10 ಅಡಿ ದೂರದಲ್ಲಿ ನಿಂತಿದ್ದರು. ಚಾಸಾ 6 ರವರ ಅಂಗಡಿಯ ಎಡಭಾಗಕ್ಕೆ ಬೇಕರಿ ಇದ್ದು , ಬಲಭಾಗಕ್ಕೆ ಖಾಲಿ ಜಾಗವಿರುತ್ತದೆ . ಸದರಿ ಬೇಕರಿಯ ಹೆಸರು ನನಗೆ ಗೊತ್ತಿಲ್ಲ.

ಆರೋಪಿ ನಿಂತಿದ್ದಂತಹ ಜಾಗದ ಬಳಿ ಅವರ ಕಾರು ಇದ್ದ ಬಗ್ಗೆ ನಾನು ಗಮನಿಸಿರುವುದಿಲ್ಲ. ಆರೋಪಿಯನ್ನು ಸುಮಾರು 10-15 ವರುಷದಿಂದ ನೋಡುತ್ತಿದ್ದು ನನಗೆ ಅವರ ಪರಿಚಯ ಇಲ್ಲ. ಆರೋಪಿಗೆ ಮಾರುತಿ ಆಲ್ಟೋ ಕಾರು ಇರುವ ಬಗ್ಗೆ ನನಗೆ

ಗೊತ್ತಿಲ್ಲ. ನಾನು ಚಾಸಾ 6 ರವರ ಅಂಗಡಿಯ ಬಳಿ ನಿಂತಿರುವಾಗ ಫ್ರಾಸಾ 1 ಹಾಗೂ ಚಾಸಾ 4 ರವರು ಹಾಸನ ರಸ್ತೆಯಿಂದ ಪಂಚಾಯತಿ ಕಡೆಗೆ ಹೋಗುತ್ತಿದ್ದರು . ಫ್ರಾಸಾ 1 ರವರ ಕೈಯಲ್ಲಿ ದೊಣ್ಣೆ ಇರುವುದನ್ನು ನೋಡಿದಿರಾ ಎಂದರೆ ಸಾಕ್ಷಿ ದೊಣ್ಣೆ ಇರಲಿಲ್ಲ ಎನ್ನುವರು . ಆ ಸಮಯದಲ್ಲಿ ಚಾಸಾ 6 ರವರ ಅಂಗಡಿಯ ಪಕ್ಕದಲ್ಲಿ ಆರೋಪಿ ಫೋನ್ ನಲ್ಲಿ ಮಾತನಾಡುವಾಗ ಫ್ರಾಸಾ 1 ರವರು ಆರೋಪಿಯ ಮೇಲೆ ದಾಳಿ ಮಾಡಿರುವುದನ್ನು ನೋಡಿದಿರಾ ಎಂದರೆ ಸಾಕ್ಷಿ ಫ್ರಾಸಾ 1 ರವರು ದಾಳಿ ಮಾಡಿರುವುದಿಲ್ಲ ಆರೋಪಿಯೇ ಅವರ ಮೇಲೆ ದಾಳಿ ಮಾಡಿರುವುದಾಗಿ ನುಡಿಯುತ್ತಾರೆ . ಆ ದಿನ ಫ್ರಾಸಾ 1 ರವರು ಪ್ಯಾಂಟ್ ಶರ್ಟ್ ಧರಿಸಿದ್ದರು . ಫ್ರಾಸಾ 4 ರವರು ಪ್ಯಾಂಟ್ ಟೀ ಶರ್ಟ್ ಧರಿಸಿದ್ದರು .

ಆರೋಪಿ ಕಲ್ಲಿನಿಂದ ಫ್ರಾಸಾ 1 ರವರ ಎಡ ಭುಜಕ್ಕೆ ಹಲ್ಲೆ ಮಾಡಿರುತ್ತಾರೆ . ಆರೋಪಿ ಒಂದು ಸಲ ಕಲ್ಲಿನಿಂದ ಫ್ರಾಸಾ 1 ರವರ ಭುಜಕ್ಕೆ ಹಲ್ಲೆ ಮಾಡಿರುತ್ತಾರೆ . ಸದರಿ ಕಲ್ಲು ಬಾಡ್ರಸ್ ಕಲ್ಲಾಗಿರುತ್ತದೆ . ಕಲ್ಲು ರಸ್ತೆಯ ಪಕ್ಕದಲ್ಲಿ ಬಿದ್ದಿತ್ತು . ಆರೋಪಿ ಫ್ರಾಸಾ 1 ರವರಿಗೆ ಕಲ್ಲಿನಿಂದ ಹಲ್ಲೆ ಮಾಡಿದಾಗ ಅವರು ರಸ್ತೆಯ ಬದಿಗೆ ಬಿದ್ದಿರುತ್ತಾರೆ. ರಸ್ತೆಯ ಪಕ್ಕದಲ್ಲಿ ಚರಂಡಿ ಇದ್ದು ಅದರ ಮೇಲೆ ಸಿಮೆಂಟ್ ಸ್ಲಾಬ್ ಮುಚ್ಚಲಾಗಿದೆ. ಹಲ್ಲೆಯಲ್ಲಿ ಫ್ರಾಸಾ 1 ರವರು ರಸ್ತೆ ಹಾಗೂ ಚರಂಡಿಯ ಮಧ್ಯದಲ್ಲಿ ಬಿದ್ದಿರುತ್ತಾರೆ. ಫ್ರಾಸಾ 1 ರವರ ಮೇಲೆ ಹಲ್ಲೆ ನಡೆಯುತ್ತಿದೆ ಎಂದು ಹೇಳುವಾಗ ಫ್ರಾಸಾ 4 ರವರು ಪಕ್ಕದಲ್ಲಿ ನಿಂತಿದ್ದರು . ಗಲಾಟೆಯಾಗಿ ಫ್ರಾಸಾ 1 ರವರು ಕೆಳಗೆ ಬಿದ್ದಾಗ ನಾನು , ಫ್ರಾಸಾ 2 , ಚಾಸಾ 4 ರವರು ಸೇರಿಕೊಂಡು ಫ್ರಾಸಾ 1 ರವರನ್ನು ಉಪಚರಿಸಿದ್ದು ಆ ಸಮಯದಲ್ಲಿ ಬೇರೆ ಜನರು ಹತ್ತಿರಕ್ಕೆ ಬಂದಿರುವುದಿಲ್ಲ. ಗಲಾಟೆಯಲ್ಲಿ ಫ್ರಾಸಾ 1 ರವರ ಬಲ ಕಾಲಿಗೆ ಆರೋಪಿ ತುಳಿದಿರುತ್ತಾರೆ. ಆ ಸಮಯದಲ್ಲಿ ಫ್ರಾಸಾ 1 ರವರು ಶೂ ಅಥವಾ ಚಪ್ಪಲಿ ಧರಿಸಿರುವ ಬಗ್ಗೆ ನಾನು ಗಮನಿಸಿರುವುದಿಲ್ಲ. ಫ್ರಾಸಾ 1 ರವರನ್ನು ಉಪಚರಿಸಿ ನಾವು ನೀರು ಕುಡಿಸುವಾಗಲು ಅವರಿಗೆ ಪ್ರಜ್ಞೆ ಇರಲಿಲ್ಲ. ನಂತರವು ಅವರಿಗೆ ಪ್ರಜ್ಞೆ ಬಂದಿರುವುದಿಲ್ಲ. ಸದರಿ ದಿನ ನಾನು

ಸಮಾರು 12 ರಿಂದ 12-30 ರವರೆಗೆ ಸ್ಥಳದಲ್ಲಿ ಇದ್ದೆ . ಗಲಾಟೆಯ ನಂತರ ಫ್ರಾಸಾ 1 ರವರನ್ನು ನಾನು , ಫ್ರಾಸಾ 2 ಹಾಗೂ ಚಾಸಾ 4 ರವರು ಆಸ್ಪತ್ರೆಗೆ ದಾಖಲಿಸಿರುತ್ತೇವೆ . ಹೆಬ್ಬಾಲೆಯಲ್ಲಿ ಪ್ರಾಥಮಿಕ ಚಿಕಿತ್ಸಾ ಕೇಂದ್ರ ಇದ್ದು ಸದರಿ ದಿನ ನಾವು ಅಲ್ಲಿಗೆ ಹೋಗಿರುವುದಿಲ್ಲ. ಫ್ರಾಸಾ 1 ರವರನ್ನು ಕುಶಾಲನಗರ ಸರಕಾರಿ ಆಸ್ಪತ್ರೆಗೆ ಯಾವುದೋ ಒಂದು ಕಾರಿನಲ್ಲಿ ಕರೆದುಕೊಂಡು ಹೋಗಿದ್ದು ಸದರಿ ಕಾರಿನವರ ಪರಿಚಯ ಇರುವುದಿಲ್ಲ. ರಸ್ತೆಯಲ್ಲಿ ಬರುತ್ತಿದ್ದಂತಹ ಕಾರನ್ನು ತಡೆದು ಫ್ರಾಸಾ 1 ರವರನ್ನು ಚಿಕಿತ್ಸೆಗೆ ಕರೆದುಕೊಂಡು ಬಂದಿರುತ್ತೇವೆ. ಹೆಬ್ಬಾಲೆಯಿಂದ- ಕುಶಾಲನಗರ ಸುಮಾರು 12 ಕಿ ಮೀ ದೂರವಿರುತ್ತದೆ. ಆಸ್ಪತ್ರೆಗೆ ಹೋಗುವ ಮಾರ್ಗ ಮಧ್ಯದಲ್ಲಿ ಫ್ರಾಸಾ 1 ರವರಿಗೆ ಪ್ರಜ್ಞೆ ಬಂದಿರುವುದಿಲ್ಲ. ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸುವ ಸಮಯದಲ್ಲೂ ಫ್ರಾಸಾ 1 ರವರಿಗೆ ಪ್ರಜ್ಞೆ ಇರಲಿಲ್ಲ. ಸದರಿ ದಿನ ಹೊರ ರೋಗಿ ಚೀಟಿಯನ್ನು ಯಾರು ಮಾಡಿಸಿದರು ಎಂದು ನನಗೆ ಗೊತ್ತಿಲ್ಲ. ಸದರಿ ದಿನ ಆಸ್ಪತ್ರೆಗೆ ದಾಖಲಾದ ನಂತರ ಫ್ರಾಸಾ 1 ರವರಿಗೆ ಸರಕಾರಿ ಆಸ್ಪತ್ರೆಯ ಎದುರು ಇರುವ ಖಾಸಗಿ ಆಸ್ಪತ್ರೆಯಲ್ಲಿ ಎಕ್ಸರೇ ಮಾಡಿಸಲಾಯಿತು . ಎಕ್ಸರೇ ಮಾಡಿಸಲು ಫ್ರಾಸಾ 1 ರವರ ಹೆಂಡತಿ , ನಾನು , ಚಾಸಾ 4 ಹಾಗೂ ಫ್ರಾಸಾ 2 ರವರು ಕರೆದುಕೊಂಡು ಹೋಗಿರುತ್ತೇವೆ . ಆ ಸಮಯದಲ್ಲಿ ಫ್ರಾಸಾ 1 ರವರಿಗೆ ಪ್ರಜ್ಞೆ ಇದ್ದ ಬಗ್ಗೆ ನಾನು ಗಮನಿಸಿರುವುದಿಲ್ಲ ಅವರನ್ನು ಭುಜದ ಮೇಲೆ ಕೈ ಹಾಕಿಸಿ ಕೊಂಡು ಕರೆದುಕೊಂಡು ಹೋಗಿರುತ್ತೇವೆ . ಕುಶಾಲನಗರ ಸಮೂದಾಯ ಕೇಂದ್ರದಲ್ಲಿ ವಿಲ್ ಚೇರ್ ಇರುವ ಬಗ್ಗೆ ನಾನು ಗಮನಿಸಿರುವುದಿಲ್ಲ. ಎಕ್ಸರೆ ಮಾಡುವಾಗ ನಮ್ಮನ್ನು ಎಕ್ಸರೆ ರೂಂ ನೊಳಗೆ ಬಿಟ್ಟಿರುವುದಿಲ್ಲ. ಅದೇ ದಿನ ಎಕ್ಸರೆ ಫಿಲಂ ನೀಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಫ್ರಾಸಾ 1 ರವರನ್ನು ಚಿಕಿತ್ಸೆಗಾಗಿ ದಾಖಲಿಸಿದಾಗ ಆಸ್ಪತ್ರೆಯಲ್ಲಿ ವೈದ್ಯರು ಇದ್ದರು . ವೈದ್ಯರಿಗೆ ನಾನು ಘಟನೆಯ ಹಿನ್ನೆಲೆಯನ್ನು ಹೇಳಿರುವುದಿಲ್ಲ. ಆಸ್ಪತ್ರೆಯಲ್ಲಿ ಪೋಲಿಸರು ಬಂದ ಪ್ರಕರಣ ದಾಖಲಿಸುವವರೆಗೂ ನಾನು ಇದ್ದು ನಂತರ ನಾನು ವಾಪಾಸ್ಸು ಹೋಗಿರುತ್ತೇನೆ .

ಪೋಲಿಸರು ಪ್ರಕರಣ ದಾಖಲಿಸಲು ಆಸ್ಪತ್ರೆಗೆ ಬಂದಾಗ ಫ್ರಾಸಾ 1 ರವರಿಗೆ ಪ್ರಜ್ಞೆ ಇದ್ದುದರ ಬಗ್ಗೆ ನನಗೆ ಗೊತ್ತಿಲ್ಲ. ಪ್ರಕರಣ ದಾಖಲಾದ ನಂತರ ಫ್ರಾಸಾ 1 ರವರನ್ನು ಅವರ ಹೆಂಡತಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿಗೆ ಕರೆದುಕೊಂಡು ಹೋಗಿರುತ್ತಾರೆ . ಫ್ರಾಸಾ 1 ರವರನ್ನು ಮೈಸೂರಿಗೆ ಕರೆದುಕೊಂಡು ಹೋಗುವಾಗ ನಾನು ಆಸ್ಪತ್ರೆಯ ಬಳಿಯೇ ಇದ್ದೆ . ಆ ಸಮಯದಲ್ಲಿ ನಾನು ಫ್ರಾಸಾ 1 ರವರ ಬಳಿ ಹೋಗಿರುವುದಿಲ್ಲ ಹಾಗಾಗಿ ಅವರಿಗೆ ಆ ಸಮಯದಲ್ಲಿ ಪ್ರಜ್ಞೆ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಈ ಪ್ರಕರಣದ ವಿಚಾರವಾಗಿ ನಾನು ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ.

ದಿ 24-07-2020 ರಂದು ಆರೋಪಿ ಫ್ರಾಸಾ 1 ರವರಿಗೆ ಹಲ್ಲೆ ಮಾಡಿರುವುದಿಲ್ಲ ಬದಲಾಗಿ ಫ್ರಾಸಾ 1 ರವರೇ ದೊಣ್ಣೆಯಿಂದ ಆರೋಪಿಗೆ ಹೊಡೆದು ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಫ್ರಾಸಾ 1 ರವರು ಆರೋಪಿಯನ್ನು ಚರಂಡಿಯ ಮೇಲೆ ತಳ್ಳಿ ಹಲ್ಲೆ ಮಾಡುತ್ತಿರುವ ದೃಶ್ಯ ಚಾಸಾ 6 ರವರ ಅಂಗಡಿಯ ಸಿ ಸಿ ಟಿ ವಿ ಯಲ್ಲಿ ಸೆರೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ತದನಂತರ ಆರೋಪಿ ಸುಧಾರಿಸಿ ಕೊಂಡು ಅಲ್ಲೆ ಇದ್ದ ತಮ್ಮ ಕಾರಿನಲ್ಲಿ ಕುಶಾಲನಗರ ಕಡೆ ಬಂದರು ಎಂದರೆ ನಾನು ನೋಡಿರುವುದಿಲ್ಲ.

ದಿ 24-07-2020 ರಂದು ಫ್ರಾಸಾ 1 ರವರು ಪ್ಯಾಂಟ್ ಶರ್ಟ ಧರಿಸಿ ಬಂದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನ ಎಂದರೆ ಸರಿಯಲ್ಲ. ಸದರಿ ದಿನ ಫ್ರಾಸಾ 1 ರವರು ಟೀ ಶರ್ಟ್ ಮತ್ತು ಪಂಚೆ ಧರಿಸಿದ್ದರು ಎಂದರೆ ಸರಿಯಲ್ಲ. ಅದೇದಿನ ಆರೋಪಿ ಫ್ರಾಸಾ 1 ರವರು ಮಾಡಿರುವ ಹಲ್ಲೆ ಬಗ್ಗೆ ದೂರು ದಾಖಲಿಸಿದ್ದು ಆ ಬಗ್ಗೆ ಫ್ರಾಸಾ 1 ರವರು ನನಗೆ ತಿಳಿಸಿರುವುದಿಲ್ಲ.

ನಾನು ಫ್ರಾಸಾ 1 ರವರ ಬಳಿ ಸುಮಾರು 8 ವರುಷಗಳಿಂದ ಕೂಲಿ ಮಾಡಿ ಕೊಂಡಿರುವ ಕಾರಣ ಅವರು ಹೇಳಿ ಕೊಟ್ಟಂತೆ ಘಟನೆಯ ಯಾವುದೇ ವಿಚಾರಗಳು ತಿಳಿಯದೇ ಇದ್ದರು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಹಾಗೂ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರ ದ ನ್ಯಾ ದಂ, ಕುಶಾಲನಗರ